ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುವಂಥ ಕೆರೆಗಳ ಕೆಲಸವನ್ನು ನಾವು ಮಾಡುವುದಿಲ್ಲ. ಅದನ್ನು ಆರ್‌ಡಿಪಿಆರ್ ರವರು ಸರ್ಕಾರದ ನಿಯಮಗಳ ಪ್ರಕಾರ ನಮಗೆ ವಾಪಸ್ ಕೊಟ್ಟರೆ, ಈ ಕೆಲಸವನ್ನು ಕೈಗೆತ್ತಿಕೊಳ್ಳಬಹುದು. ಹೀಗೆ ಮಾಡಿದರೆ, ಈಗ ಆಗಿರುವಂಥ ಹತ್ತು ಲಕ್ಷ ರೂ.ಗಳ ಖರ್ಚಿನ ಜೊತೆಗೆ ಉಳಿದ ಹಣವನ್ನು ಖರ್ಚು ಮಾಡಿ, ಬ್ಯಾರೇಜನ್ನು ಪ್ರಾರಂಭ ಮಾಡಿಸಲು ಸರ್ಕಾರ ಬದ್ಧವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ ಮತ್ತು ಈ ಕೆಲಸಗಳನ್ನು ಆರ್ಥಿಕ ಅನುಗುಣವಾಗಿ ಪ್ರಾರಂಭ ಮಾಡಲಾಗುತ್ತದೆ ಎಂದು ಸಹ ನಾನು ಹೇಳಬಯಸುತ್ತೇನೆ.

ಶ್ರೀ ಕೆ.ಬಿ. ಕೋಳೀವಾಡ್ : ಈ ಹತ್ತು ಲಕ್ಷ ರೂ.ಗಳು ಖರ್ಚಾಗಿದೆ ಎಂದು ಏನು ಹೇಳಲಾಗಿದೆ, ಇದರಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ ಎನ್ನಲಾಗಿದೆ, ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರಿಗೆ ಒಂದು ಮನವಿಯನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಎನ್‌ಕ್ವೈರಿ ಮಾಡಲಾಗಿದೆಯೇ? ಮಡದಿದ್ದರೆ ಮಾಡುವಿರೇ ಹೇಗೆ ಎಂದು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಇದರಲ್ಲೂ ಅವ್ಯವಹಾರ ನಡೆದಿದೆಯೇ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಇದರ ಬಗ್ಗೆ ವಿಚಾರಣೆ ಮಾಡುತ್ತೇನೆ.

ವಾರಾಹಿ ನೀರಾವರಿ ಯೋಜನೆ.

2533 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯು ಉತ್ತರ ಭಾಗದ ಸಹಸ್ರಾರು ಹೆಕ್ಟೇರ್ ಜಮೀನಿಗೆ ವ್ಯವಸಾಯಕ್ಕಾಗಿ ನೀರು ಪೂರೈಸುವ ವರಾಹಿ ನೀರಾವರಿ ಯೋಜನೆಯ ಕಾಮಗಾರಿ ಯಾವಾಗ ಶಂಕು ಸ್ಥಾಪನೆಗೆ ಮಾಡಲಾಯಿತು?

ಆ) ಸದರಿ ಯೋಜನೆಯಲ್ಲಿ ಇಲ್ಲಿಯವರೆವಿಗೆ ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ವೆಚ್ಚ ಮಾಡಲಾಗಿದೆ ಹಾಗೂ ಸಿಬ್ಬಂದಿಗಳ ವೇತನಕ್ಕಾಗಿ ಎಷ್ಟು ವ್ಯಯ ಮಾಡಲಾಗಿದೆ?

ಇ) ಈ ಯೋಜನೆಯ ಕಾಮಗಾರಿ ವಿಳಂಬಕ್ಕೆ ಕಾರಣಗಳೇನು?

ಈ) ಈ ಯೋಜನೆಯು ಕೆಲಸಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ದಿನಾಂಕ 30-12-80 ರಂದು ಶಂಕು ಸ್ಥಾಪನೆ ಮಾಡಲಾಯಿತು.

ಆ) ಸದರಿ ಯೋಜನೆಗೆ 1991ರ ಜುಲೈ ಅಂತ್ಯದವರೆಗೆ ಈ ಕೆಳಕಂಡ ವ್ಯಯ ಮಾಡಲಾಗಿದೆ.

1.	ಕಾಮಗಾರಿಗಳ ವೆಚ್ಚ	1,63,36,294-00
2.	ಸಾಗಾಣಿಕೆ ಹಾಗೂ ಯಂತ್ರೋಪಕರಣಗಳ ವೆಚ್ಚ	15,14,600-00
3.	ಸಿಬ್ಬಂದಿ ವೆಚ್ಚ	85,07,006-00
	ಒಟ್ಟು ರೂ.	**2,63,57,900-00**

ಇ) ಕಾದಿರಿಸಿದ ಅರಣ್ಯ ಪ್ರದೇಶದ ಬಿಡುಗಡೆ ಕೇಂದ್ರ ಸರ್ಕಾರದಿಂದ ಆಗಬೇಕಾಗಿರುವುದರಿಂದ ಕೆಲಸ ಪ್ರಾರಂಭವಾಗಿರುವುದಿಲ್ಲ.

ಈ) ಕಾದಿರಿಸಿದ ಅರಣ್ಯ ಪ್ರದೇಶ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ತಕ್ಷಣ ಕೆಲಸವನ್ನು ಪ್ರಾರಂಭಿಸಲಾಗುವುದು.

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಅಧ್ಯಕ್ಷರೆ, ಕಳೆದ ಐದಾರು ವರ್ಷಗಳಿಂದ ಈ ವಿಚಾರವಾಗಿ ನಾನು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದಲ್ಲಿ 40,000 ಎಕರೆ ಭೂಮಿಗೆ ನೀರನ್ನು ಪೂರೈಸುವ ಒಂದು ದೊಡ್ಡ ಯೋಜನೆ ಈ ವಾರಾಹಿ ಜಲ ವಿದ್ಯುತ್ ಯೋಜನೆ. ಈಗಿರುವ ವಿದ್ಯುತ್ ಯೋಜನೆ ವ್ಯರ್ಥವಾಗಿದ್ದು, ಸಮುದ್ರಕ್ಕೆ ಹರಿದು ಹೋಗುವ ನೀರನ್ನು ಕಡೆಗಟ್ಟಿ ನೀರಾವರಿಗೆ ಮತ್ತು ವಿದ್ಯುಚ್ಛಕ್ತಿಗೆ ಉಪಯೋಗಿಸುವಂಥ ಒಂದು ಕಡಿಮೆ ದರದ ಯೋಜನೆ ಇದು.

ಇದಕ್ಕೆ ಫೌರೆದೇಶನ್ ಹಾಕಿ ಹನ್ನೊಂದು ವರ್ಷವಾಗಿದೆ ಒಂದು ಇಂಚೂ ಮುಂದೆ ಹೋಗಿಲ್ಲ. ಈಗಾಗಲೇ 2 ಕೋಟಿ 63 ಲಕ್ಷ 57,900 ಖರ್ಚಾಗಿದೆ. ಯಾವುದಕ್ಕೆ ಖರ್ಚಾಗಿದೆ? ಕಾಮಗಾರಿಗಳ ವೆಚ್ಚ, ಅಂದರೆ, ಬರೀ ಕಟ್ಟಡಕ್ಕೆ, ಅಧಿಕಾರಿಗಳು ಇರುವಂಥ ಕಟ್ಟಡಕ್ಕೆ, ಸಿಬ್ಬಂದಿ ವೆಚ್ಚಕ್ಕೆ ಖರ್ಚಾಗಿದೆ. ಇದು ಯಾವುದೇ ಯೋಜನೆಗೆ ಶೋಭೆ ತರುವಂಥದಲ್ಲ. ಹಿಂದಿನ ಸರ್ಕಾರದವರು ನಾವು ಇದನ್ನೂ ಮಾಡಿಸುತ್ತೇವೆಂದು ಹೇಳಿದರು. ಅನಂತರ ಬಂದ ಸರ್ಕಾರದವರು ಹಿಂದಿನವರು ಮಾಡಿಲ್ಲ ನಾವು ಮಡಿಸುತ್ತೇವೆಂದು ಹೇಳಿಬಿಟ್ಟರ. ವಾಗ್ದಾನ ಕೊಟ್ಟಿದ್ದರೂ ಅದು ಇನ್ನೂ ಆಗಿಲ್ಲ. ಈಗಿನ ಮಂತ್ರಿಗಳು ಇದನ್ನು ಮಾಡಿಸುತ್ತೇನೆಂದು ಹೇಳಿದ್ದಾರೆ. ಇದರಲ್ಲಿ ಒಂದೇ ಒಂದು ಲೋಪ, ತೊಂದರೆ ಏನೆಂದರೆ, ಕೇಂದ್ರ ಸರ್ಕಾರದಿಂದ ಕಾದಿರಿಸಿದ ಅರಣ್ಯ ಬಿಡುಗಡೆಗೆ ಅನುಮತಿ ಸಿಕ್ಕಿಲ್ಲ. ನಾನು 4-5 ವರ್ಷಗಳಿಂದ ಈ ಪ್ರಶ್ನೆಗಳನ್ನು ಕೇಳಿದಾಗ್ಯೂ ಇದೇ ಉತ್ತರ ಸಿಕ್ಕಿದೆ. ಇದಕ್ಕೆ ಒಂದು ಸಮಿತಿ ಮಾಡಿದ್ದೇವೆಂದು ಹೇಳಿದ್ದಾರೆ. ಆ ಸಮಿತಿ ಒಂದು ಸಲವಾದರೂ ಮೀಟ್ ಮಾಡಿದೇಯೇ, ಇಲ್ಲಿಂದ ಪತ್ರ ಹೋಗಿದೆಯೇ? 5-6 ವರ್ಷಗಳಲ್ಲಿ ಇಷ್ಟು ಕೆಲಸವಾಗದೇ ಇದ್ದರೆ, ಈ ಯೋಜನೆ ಆಗುವುದಿಲ್ಲ. ಇದರ ಬಗ್ಗೆ ಬರೀ ಆಶ್ವಾಸನೆ ಬರುತ್ತಿದೆ. ಇದು ಈಡೇರುವುದಿಲ್ಲವೆಂದು ಅಲ್ಲಿನ ಜನ ಹೇಳುತ್ತಿದ್ದಾರೆ. ನಮಗೂ ಹೇಳಿ ಹೇಳಿ ಸಾಕಾಗಿದೆ. ಇದು ಆಗುತ್ತದೆಯೋ ಇಲ್ಲವೋ ಎಂದು ತಾವು ಸ್ಪಷ್ಟವಾಗಿ ಉತ್ತರ ಕೊಡಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಇದು ಜಂಟಿ ಇರತಕ್ಕಂಥ ಒಂದು ಯೋಜನೆ. ವಿದ್ಯುತ್ ಘಟಕದಿಂದ ವಿದ್ಯುತ್ ಉತ್ಪಾದನೆ ಮತ್ತು ನೀರಾವರಿ ಯೋಜನೆ ಎನ್ನತಕ್ಕಂಥ ವಿಷಯ ತಿಳಿದಿರತಕ್ಕಂಥ ಸಂಗತಿ. ಈಗಾಗಲೇ ವಿದ್ಯುತ್ ಘಟಕಕ್ಕೆ ಸುಮಾರು 263 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈಗಲೂ ಕಾಮಗಾರಿಗಳಿಗೆ ಹಣ ಖರ್ಚು ಮಾಡಿದ್ದೇವೆ. ನನ್ನ ತಿಳುವಳಿಕೆ ಪ್ರಕಾರ ಆ ಘಟಕದಾದ ಇನ್ನೂ ವಿದ್ಯುತ್ ಉತ್ಪತ್ತಿ ಆಗಿಲ್ಲ. ವಿದ್ಯುತ್ ಘಟಕಕ್ಕೆ ಹಣ ಖರ್ಚಾಗಿದೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರದಿಂದ ಅರಣ್ಯದ ಬಿಡುಗಡೆಗಾಗಿ ಪರವಾನಗಿ ನಮಗೆ ಬೇಕಾಗಿದೆ. ಹಿಂದೆ ಯಾವ ಸರ್ಕಾರ ಏನು ಹೇಳಿಕೆ ಮಾಡಿದೆ ಎನ್ನುವ ಪ್ರಶ್ನೆಯಲ್ಲ. ಹತ್ತು ವರ್ಷದಲ್ಲಿ ಅದು ಆಗಬೇಕಾಗಿತ್ತು. ಆಗಿಲ್ಲ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಎಲ್ಲಾ ವಿಷಯಗಳನ್ನು ಗಮನಿಸಿ

ಆದಷ್ಟು ಶೀಘ್ರವಾಗಿ ಮಾನ್ಯ ಸದಸ್ಯರ ಇಚ್ಛೆಯ ಪ್ರಕಾರ ನಾನು ಇದನ್ನು ಕಾರ್ಯರೂಪಕ್ಕೆ ತರುತ್ತೇನೆಂಬ ಆಶ್ವಾಸನೆ ಕೊಡುತ್ತಿದ್ದೇನೆ.

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಅಧ್ಯಕ್ಷರೆ, ಸಚಿವರು ಉತ್ತರ ಕೊಡುವಾಗ ಫಿಗರ್ಸ್‌ನಲ್ಲಿ ಸ್ವಲ್ಪ ವ್ಯತ್ಯಾಸವಾದಂತೆ ಕಾಣುತ್ತದೆ. 263 ಕೋಟಿ ಅಲ್ಲ ಅದು ಇಡೀ ಯೋಜನೆಯೇ ಮೆಚ್ಚ 50-60 ಕೋಟಿ ಬರುತ್ತದೆ. ಅದು 263 ಲಕ್ಷ ಅದೇನೇ ಇರಲಿ, ಈಗಿನ ರಿವೈಸ್ ಎಸ್ಟಿಮೇಟ್ ಪ್ರಕಾರ ಹೆಚ್ಚಿಗೆ ಅರಣ್ಯ ಬೇಕಾಗುವುದಿಲ್ಲ. ಪರಿಸರ ತಜ್ಞರ ಪ್ರಕಾರ ದೊಡ್ಡ ಮೊತ್ತದ ಅರಣ್ಯ ಹೋಗುವಂತಾದ್ದನ್ನು ಹೈಟನ್ನು ರೆಡ್ಯೂಸ್‌ಮಾಡಿ ಕಡಿಮೆ ಮಾಡಬೇಕೆಂದು ಮಾಡಿದ್ದಾರೆ. ಅದರ ಬಗ್ಗೆ ಅರಣ್ಯ ಇಲಾಖೆಯವರು ಬದಲಿ ಅರಣ್ಯ ಮಾಡುವುದಕ್ಕೆ ತೀರ್ಮಾನ ಮಾಡಿದ್ದಾರೆ. ರೆವಿನ್ಯೂ ಇಲಾಖೆಯವರು ಬದಲಿ ಅರಣ್ಯಕ್ಕೆ ಬೇಕಾದ ಜಾಗವನ್ನು ಕೊಡುವುದಕ್ಕೆ ಮಾಡಿದ್ದಾರೆ. ಅದೇನೂ ಕಷ್ಟವಲ್ಲ. ಈ ಯೋಜನೆಯನ್ನು ಕಾರ್ಯಗತ ಮಾಡಬೇಕು ಎನ್ನುವ ಒಂದು ಮನೋಸಂಕಲ್ಪ ಮಾಡಬೇಕು. ಅದು ಆಗುತ್ತದೆಯೇ? ಎಂದು ಕೇಳಿದ್ದಕ್ಕೆ ಹೌದು ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ, ಬಹಳ ಸಂತೋಷ.

ಅಧ್ಯಕ್ಷರು : ಹಿಂದಿನ ಸಚಿವರು ಏನು ಉತ್ತರ ಕೊಟ್ಟಿದ್ದಾರೆ. ನಿಮಗೆ ಆಗಲೂ ಸಂತೋಷವಾಗಿತ್ತೆ?

ಶ್ರೀ ಜಿ.ಎಸ್. ಆಚಾರ್ : ಹಿಂದಿನ ಸಚಿವರು ಅಲ್ಲಿಗೆ ಬಂದಿದ್ದರು. ನಾವು ಮನವಿ ಕೊಟ್ಟಿದ್ದನ್ನು ನೋಡಿದರು, ಸಂತೋಷಪಟ್ಟರು. ಮತ್ತು ಉತ್ತರ ಕೊಡುವಾಗ ಖಂಡಿತವಾಗಿಯೂ ಮಾಡಿಸುತ್ತೇನೆಂದು ಹೇಳಿದ್ದರು. ಅವರ ವಾಗ್ದಾನದಿಂದ ನಾನು ಬಹಳ ಸಂತೋಷಪಟ್ಟುಕೊಂಡಿದ್ದೆ. ಆದರೆ, ಇನ್ನೂ ಕೆಲಸ ಆಗಿಲ್ಲ. ಈಗ ಇದನ್ನು ಮಾನ್ಯ ಸಚಿವವು ಮಾಡಿಸುತ್ತಾರೆಂಬ ಧೈರ್ಯ ನನಗಿದೆ. ಆದುದರಿಂದ, ಆದಷ್ಟು ಬೇಗ ಈ ಕೆಲಸ ಮಾಡಿಸಿಕೊಡಬೇಕು ಮತ್ತು ತಿರುಗಿ ನಮ್ಮನ್ನು ಜನರು ಬಯ್ಯುವ ಹಾಗೆ ಆಗಬಾರದೆಂದು ನನ್ನ ಇಚ್ಛೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಕೇಂದ್ರ ಸರ್ಕಾರದಿಂದ ಈ ಅರಣ್ಯ ಬಿಡುಗಡೆ ಬಗ್ಗೆ ಒಂದು ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆ, ಆ ಕಾರ್ಯಕ್ರಮ ತೆಗೆದುಕೊಂಡು ಈ ಯೋಜನೆ ಪೂರ್ತಿಯಾಗಿ ಮಾಡುವುದಕ್ಕೆ ಏನು ಮಾನ್ಯ ಸದಸ್ಯರು ಒಂದು ಪ್ರಸ್ತಾವನೆ ಮಾಡಿದ್ದಾರೆ, ಅದೆಲ್ಲಾ ಕಾರ್ಯಕ್ರಮಗಳನ್ನು ನಾನು ಮಾಡಿಕೊಡುತ್ತೇನೆಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಜಿ.ಎಸ್. ಆಚಾರ್ : ಕೇಂದ್ರ ಸರ್ಕಾರದಲ್ಲಿ ಕರ್ನಾಟಕ ಪ್ರಭಾವಿ ಮಂತ್ರಿಗಳಿರುವುದರಿಂದ ಇದನ್ನು ಮಾಡಿಸಲಿಕ್ಕೆ ಸಾಧ್ಯವಾಗಬಹುದು. ಈ ಯೋಜನೆಯನ್ನು ಆದಷ್ಟು ಕಾಳಜಿಯಿಂದ ಮುಂದುವರೆಸಬೇಕು.

ಅಧ್ಯಕ್ಷರು : ಮಾನ್ಯ ಜಾಲಪ್ಪನವರೇ, ನಿಮ್ಮ ಪ್ರಶ್ನೆಗೆ ಉತ್ತರ ಕೊಡಲು ಎರಡು ವಾರಗಳ ಕಾಲಾವಕಾಶ ಕೊಡಬೇಕೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಕೇಳಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಬೆಳಿಗ್ಗೆ ಹೇಳಿ ಕಳುಹಿಸಿದರೆ, ಸಾಯಂಕಾಲ ಉತ್ತರವನ್ನು ತಂದುಕೊಡುತ್ತಾರೆ. ಈ ಮಹತ್ತರವಾದ ಅಭಿವೃದ್ಧಿಯನ್ನು ಹೇಳಿಕೊಳ್ಳುವುದಕ್ಕೆ ಸರ್ಕಾರಕ್ಕೆ ಇಷ್ಟ ಇದೆಯೋ, ಇಲ್ಲವೋ ಏನೋ ?

ಅಧ್ಯಕ್ಷರು : ಈ ಪ್ರಶ್ನೆಗೆ ಎರಡು ವಾರಬೇಕೇ ಸಚಿವರೆ. ಒಂದು ವಾರದಲ್ಲಿ ಕೊಡಲು ಸಾಧ್ಯವಾಗುತ್ತದೆಯೇ ?

ಶ್ರೀ ಕೆ.ಹೆಚ್. ಪಾಟೀಲ್ : ಮುಂದಿನ ವಾರ ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಮುಂದಿನ ವಾರ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು : ಪ್ರಶ್ನೆಯ ಸಂಖ್ಯೆ : 2575ಕ್ಕೆ ಎರಡು ವಾರ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಬಸವರಾಜ ಪಾಟೀಲ ಅಟ್ಟೂರ್ : ಅಧ್ಯಕ್ಷರೆ ಇದು ಬಹಳ ಮಹತ್ವವಾದ ವಿಚಾರ.

ಅಧ್ಯಕ್ಷರು : ಜಿಲ್ಲಾ ಪರಿಷತ್ ಕಛೇರಿ ಮುಚ್ಚಿರುವುದು ಅಲ್ಲವೆ?

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ಕಛೇರಿಯನ್ನು ಲಾಕ್ ಮಾಡಿದ್ದಾರೆ, ಏಕೆ ಮಾಡಿದ್ದಾರೆ, ಸರಿಯಾದ ರೀತಿಯಲ್ಲಿ ಉತ್ತರವನ್ನು ಆದಷ್ಟು ಬೇಗ ತರಿಸಬೇಕು.

ಅಧ್ಯಕ್ಷರು : ಆದಷ್ಟು ಬೇಗ ತರಿಸುತ್ತೇನೆ.

ಕೋಲಾರ ತಾಲ್ಲೂಕಿನಲ್ಲಿ ಲೋಕಪಯೋಗಿ ಇಲಾಖೆಯ ಕಟ್ಟಡಗಳು

2580 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಲೋಕಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ಹತೋಟಿ ಮತ್ತು ಸಂರಕ್ಷಣೆಗಳ ವ್ಯಾಪ್ತಿಗೆ ಬರುವ ಕಟ್ಟಡಗಳ ಹೆಸರುಗಳನ್ನು ಅವುಗಳ ಕಟ್ಟಡಗಳುಳ್ಳ ಅಳತೆಯೊಂದಿಗೆ ನೀಡುವುದು.

ಆ) 1987-88, 88-89, 89-90, 90-91 ಸಾಲುಗಳಲ್ಲಿನ ಮತ್ತು 1-4-91ರಿಂದ 20-8-91ರವರೆಗಿನ ಅವಧಿಯಲ್ಲಿ ಈ ಎಲ್ಲ ಕಟ್ಟಡಗಳ ವಾರ್ಷಿಕ ಆದಾಯ, ಖರ್ಚು ಮಾಡಿದ ಹಣ ಮತ್ತು ವಾರ್ಷಿಕ ದುರಸ್ಥಿಗಳ ವಿವರಗಳು.

ಇ) ಸುಸ್ಥಿಯಲ್ಲಿರುವ ಕಟ್ಟಡಗಳ ವಿವರಗಳು.

ಈ) ಈ ಕಟ್ಟಡಗಳ ದುರಸ್ತಿಗಾಗಿ ಬೇಕಾಗುವ ಹಣವೆಷ್ಟು?

ಉ) ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಅವರ ಕೊಠಡಿಯು ಸೇರಿದಂತೆ ಸೋರುತ್ತಿರುವುದು ನಿಜವೆ?

ಊ) ಸೂಪರಿಂಟೆಂಡ್ ಆಫ್ ಪೋಲೀಸ್‌ರವರ ಕೊಠಡಿಯಲ್ಲಿನ ಮೇಲ್ವಾಚಾರಣೆಯ ಪ್ಲಾಸ್ಟರ್ ಬಿದ್ದಿರುವುದು ನಿಜವೆ ಹಾಗಿದ್ದಲ್ಲಿ ಈ ಕಟ್ಟಡಗಳ ದುರಸ್ತಿಗಾಗಿ ಕೈಗೊಂಡ ಕ್ರಮವೇನು?

ಋ) ಸರ್ಕಾರವು ಈ ಎಲ್ಲ ಕಟ್ಟಡಗಳ ದುರಸ್ತಿಗಾಗಿ ಬೇಕಾಗುವ ಹಣವನ್ನು ಬಿಡುಗಡೆ ಮಾಡಲಾಗಿದೆಯೇ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು) :

ಅ) ವಿವರಗಳನ್ನು ಪ್ರತ್ಯೇಕವಾಗಿ ಲಗತ್ತಿಸಲಾಗಿದೆ.